ಚರ್ಚೆಯಾಗುವುದು ಬೇಡ. ನಾನು ಮಾನ್ಯ ಕಾರ್ಮಿಕ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಈ ಪ್ರಾವಿಜನ್ ಜೊತೆಗೆ ಇನ್ನೂ ಏನಾದರೂ ನಿಮಗೆ ಸಂಶಯಗಳು ಇದ್ದರೆ ವಿರೋಧಪಕ್ಷದ ಫ್ಲೋರ್ ಲೀಡರ್ಸ್‌ನ್ನು ಕರೆದು ಚರ್ಚೆ ಮಾಡಿ ನಂತರದಲ್ಲಿ ಇದನ್ನು ನಾವು ಮತ್ತೆ ಈ ಸದನಕ್ಕೆ ತೆಗೆದುಕೊಂಡು ಬರುತ್ತೇವೆ. ಇದನ್ನು ಮಾನ್ಯ ಕಾರ್ಮಿಕ ಸಚಿವರು ಒಪ್ಪುತ್ತಾರೆ ಅಂತ ನಾನು ಭಾವಿಸುತ್ತೇನೆ.

ಶ್ರೀ ಜೆ. ಎ. ಶ್ರೀರಾಮರೆಡ್ಡಿ : ಆಗಬಹುದು ಮಾನ್ಯ ಅಧ್ಯಕ್ಷರೇ, ಮಾನ್ಯ ಕಾನೂನು ಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ, ಫ್ಲೋರ್ ಲೀಡರ್ಸ್‌ನ್ನು ಕರೆದು ಮಾತನಾಡುತ್ತೇವೆ, ಆದ್ದರಿಂದ ಇದನ್ನು ತಡೆ ಹಿಡಿಯುತ್ತೇವೆ ಎಂದು.

ಶ್ರೀ ತನ್ವೀರ್ ಸೇಠ್ : ಮಾನ್ಯ ಅಧ್ಯಕ್ಷರೆ, ಈ ವಿಧೇಯಕವನ್ನು ನಾನು ತಾತ್ಕಾಲಿಕವಾಗಿ ಹಿಂತೆಗೆದುಕೊಂಡು ನಂತರ ಚರ್ಚೆ ಮಾಡಿ ಮಂಡಿಸುತ್ತೇನೆ.

ಶ್ರೀ ಜೆ. ಎ. ಶ್ರೀರಾಮರೆಡ್ಡಿ : ಆಯಿತು.

ಉಪಾಧ್ಯಕ್ಷರು : ಆಯಿತು ಬಿಡಿ.

(ವಿಧೇಯಕದ ಪರಿಶೀಲನೆಯನ್ನು ತಾತ್ಕಾಲಿಕವಾಗಿ ಹಿಂತೆಗೆದುಕೊಳ್ಳಲು ಅನುಮತಿ ನೀಡಲಾಯಿತು)

(V) ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2005

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, 2005ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚನೆಗೆ ಕೊಡುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು.

ಶ್ರೀ ಎಂ. ಪಿ. ಪ್ರಕಾಶ್ : (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, ಇದೊಂದು ಬಹಳ . . .

ಶ್ರೀ ಜೆ. ಸಿ. ಮಾಧುಸ್ವಾಮಿ : ಇನ್ನೊಂದು ಎರಡು ವರ್ಷ ಜಾಸ್ತಿ ಕೇಳಿಬಿಡಬೇಕಾಗಿತ್ತು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೇ, 4–5 ಸಾವಿರ ಅರ್ಜಿಗಳು ಬಾಕಿ ಇರುವುದರಿಂದ. . .

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಈಗ ಏನಾಗಿದೆ ಅಂದರೆ ತಾವು ಹೇಳಿದಂತೆ ಸುಮಾರು 4 ಲಕ್ಷ 26 ಸಾವಿರ ಫಾರಂ ನಂಬರ್ 53ದ್ದು ಇದೆ, 94 ಸಾವಿರ ಫಾರಂ ನಂಬರ್ 50ರದ್ದು ಇದೆ. ಆದ್ದರಿಂದ ನಾನು ಅಂದುಕೊಂಡಿದ್ದೆ. ಆದರೆ ವಿಧಾನ ಪರಿಷತ್ತಿನಲ್ಲಿ ಈಗಾಗಲೇ ಪಾಸಾಗಿದೆ. ಅಲ್ಲಿ ತಿದ್ದುಪಡಿಯಾದಂತಹ ರೂಪದಲ್ಲಿ ಇಲ್ಲಿಗೆ ಬಂದಿದೆ. ಆ ಕಾರಣಕ್ಕಾಗಿಯೇ ಮತ್ತೆ. . . . .

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ. ನೀವು ಇನ್ನು ಎರಡು ವರ್ಷ ಟೈಮ್ ಎಕ್ಸ್‌ಟೆಂಡ್ ಮಾಡಿದರೂ ಕೂಡ ಮುಗಿಯುವುದಿಲ್ಲ. ಏಕೆಂದರೆ ನಿಮ್ಮ ಸರ್ವೆಯರ್ ಇಲ್ಲ. ರೆಕಾರ್ಡ್‌ಗಳೇ ಬರುವುದಿಲ್ಲ ಮತ್ತು ನೀವು ಒಂದು ವರ್ಷದಿಂದ ಕಮಿಟಿಗಳೂ ಕೂಡ ಮಾಡಲಿಲ್ಲ ಈಗ ಸೆಟಲ್ ಮಾಡುವುದು ಹೇಗೆ?

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಈಗ ಎಲ್ಲಾ ಸರಿಪಡಿಸಿದ್ದೇವೆ. ನಾವು ಎಲ್ಲಾ ಶಾಸಕರಿಗೂ ಹೇಳಿದ್ದೇವೆ. ಒಂದು ವೇಳೆ ನೀವು ಯಾರನ್ನಾದರೂ ನಿಮ್ಮ ಹೆಸರುಗಳನ್ನು ಕೊಡದೇ ಇದ್ದಂತಹ ಪಕ್ಷದಲ್ಲಿ ಕೆಲವರು ಕೊಟ್ಟವರು ಇದ್ದಾರೆ, ನಾನು ಈಗಾಗಲೇ ಮತ್ತೊಂದು ಸಲ ಹೇಳುತ್ತಿದ್ದೇನೆ. ಯಾರ್ಯಾರು ಸದಸ್ಯರು ತಮ್ಮ ಹೆಸರುಗಳನ್ನು ಕೊಟ್ಟಿಲ್ಲ, ಕೊಡದೇ ಇದ್ದಂತಹ

ಪಕ್ಷದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ತಹಶೀಲ್ದಾರರು ಕಳುಹಿಸಿ ಕೊಟ್ಟಿರತಕ್ಕಂಥ ಹೆಸರುಗಳ ಮೇಲೆಯೇ ನಾವು ಕಮಿಟಿಗಳನ್ನು ರಚನೆ ಮಾಡುತ್ತೇವೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಬೇಡ ಸಾರ್, 5ನೇ ತಾರೀಖು ಒಳಗೆ ನಾವು ಕೊಡುತ್ತೇವೆ.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರೆಲ್ಲರೂ ಕೂಡ ತಾವು ಹೇಳಿದ್ದೀರಿ. 10 ಸಾವಿರಕ್ಕೂ ಹೆಚ್ಚು ಅರ್ಜಿಗಳು ಇರತಕ್ಕಂಥ ಪ್ರದೇಶದಲ್ಲಿ ನಾವು ಹೆಚ್ಚುವರಿ ಸಮಿತಿಗಳನ್ನು ನಾವು ರಚನೆ ಮಾಡುತ್ತೇವೆ.

ಶ್ರೀ ಆರಗ ಜ್ಞಾನೇಂದ್ರ : ಸಮಿತಿ ಹೆಚ್ಚು ಮಾಡುವುದೇ ಬೇಡ. ನಾವೇ ಕ್ಲಿಯರ್ ಮಾಡುತ್ತೇವೆ. ನೀವು ನಮಗೆ ಸಿಬ್ಬಂದಿ ಕೊಟ್ಟರೆ ಸಾಕು.

ಶ್ರೀ ಎಂ. ಪಿ. ಪ್ರಕಾಶ್ : ಸಿಬ್ಬಂದಿ ಹೆಚ್ಚುವರಿ ಕೊಡತಕ್ಕಂಥಾದ್ದು ಇದೆ. ಮೊದಲು ವಿಧೇಯಕ ಆಗಲಿ, ಆ ಮೇಲೆ ನಾನು ಹೇಳುತ್ತೇನೆ. ವಿಧೇಯಕವನ್ನು ತಂದಿರತಕ್ಕಂಥದ್ದು ಈಗಾಗಲೇ ಹಿರಿಯ ಸದಸ್ಯರಾದ ಮಾನ್ಯ ಮಾಧುಸ್ವಾಮಿಯವರು, ಜ್ಞಾನೇಂದ್ರರವರು ಮತ್ತು ಜಯಪ್ರಕಾಶ್ ಹೆಗ್ಡೆಯವರು ಒಂದು ವರ್ಷದವರೆಗೆ ತೆಗೆದುಕೊಳ್ಳತಕ್ಕಂಥಾದ್ದು ಮಾಡಿ ಅದು ಮುಕ್ತಾಯ ಆಗುವುದಿಲ್ಲ. ಇನ್ನು ಎರಡು ಮೂರು ವರ್ಷಗಳಾದರೂ ತೆಗೆದುಕೊಳ್ಳಿ, ನಾವು ಒಪ್ಪಿಗೆ ಕೊಡುತ್ತೇವೆ, ಪದೇ ಪದೇ ತಿದ್ದುಪಡಿ ತರುವುದು ಸಾಧುವಾದುದು ಅಲ್ಲ. ಎನ್ನುವ ಮಾತನ್ನು ಹೇಳಿದ್ದಾರೆ. ಅದನ್ನು ಸಂಪೂರ್ಣವಾಗಿ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇಲ್ಲಿ ಒಂದು ತಾಂತ್ರಿಕ ಸಮಸ್ಯೆ ಎಂದರೆ, ವಿಧಾನ ಪರಿಷತ್ತಿನಲ್ಲಿ ಈಗಾಗಲೇ ಅಂಗೀಕಾರವಾದ ರೂಪದಲ್ಲಿ ಇರುವ ಬಿಲ್ಲನ್ನು ಇಲ್ಲಿ ತಂದಿದ್ದೇನೆ. ಮತ್ತೆ ಅಲ್ಲಿಗೆ ಹೋಗಬೇಕಾಗುತ್ತದೆ. ಆ ಕಾರಣಕ್ಕಾಗಿ ಈ ಬಾರಿ ಮಾತ್ರ ಕ್ಷಮಿಸಬೇಕೆಂದು ಹೇಳಿ, ಸಿಬ್ಬಂದಿಯನ್ನು ಹೆಚ್ಚಿಗೆ ಕೊಡಬೇಕೆಂದು ಹೇಳಿದ್ದಾರೆ. ಸಿಬ್ಬಂದಿಯನ್ನು ಹೆಚ್ಚು ಕೊಟ್ಟು ವಿಲೇವಾರಿ ಮಾಡುವುದಕ್ಕೆ ಎನೇನು ಪ್ರಯತ್ನ ಮಾಡಬೇಕೋ ಮಾಡುತ್ತಿದ್ದೇನೆ. ದಯವಿಟ್ಟು ಸದನ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ;

"ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2005ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, ಖಂಡ ಎರಡು ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ಎರಡನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು) :

ಖಂಡ 1 ಇತ್ಯಾದಿ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2005ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ

"ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2005ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು

3. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ಮಂತ್ರಿಗಳನ್ನು ಕರೆಸುವುದಕ್ಕೆ ವ್ಯವಸ್ಥೆ ಮಾಡಿ.

ಉಪಾಧ್ಯಕ್ಷರು : ಆಯಿತು ಅವರು ಬರುತ್ತಾರೆ. ವಸತಿ ಸಚಿವರು ಮತ್ತು ವೈದ್ಯಕೀಯ ಶಿಕ್ಷಣ ಸಚಿವರು ಇಲ್ಲ ಆ ಪ್ರಶ್ನೆಗಳನ್ನು ನಂತರ ತೆಗೆದುಕೊಳ್ಳೋಣ. ಗ್ರಾಮೀಣಾಭಿವೃದ್ಧಿ ಸಚಿವರು ಇಲ್ಲಿ ಇದ್ದಾರೆ. ಅವರ ಪ್ರಶ್ನೆ ತೆಗೆದುಕೊಳ್ಳೋಣ.

ಪ್ರಶ್ನೆ ಸಂಖ್ಯೆ : 649 (6582)
ಪ್ರಶ್ನೆ ಸಂಖ್ಯೆ : 647 (6511)
ಮಾನ್ಯ ಸದಸ್ಯರುಗಳು ಗೈರು ಹಾಜರಿದ್ದರು.

ಖಾಸಗಿ ವೈದ್ಯಕೀಯ ತಾಂತ್ರಿಕ ಕಾಲೇಜುಗಳ ರಾಷ್ಟ್ರೀಕರಣ)

648 (6464) : ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಖಾಸಗಿ ವೈದ್ಯಕೀಯ ತಾಂತ್ರಿಕ ಕಾಲೇಜುಗಳನ್ನು ರಾಷ್ಟ್ರೀಕರಣ ಮಾಡುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

ಆ) ರಾಷ್ಟ್ರೀಕರಣ ಮಾಡುವುದರಿಂದ ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ರಾಷ್ಟ್ರೀಕರಣ ಮಾಡದಿರಲು ಖಾಸಗಿ ಕಾಲೇಜು ಮಾಲೀಕತ್ವದ ತೀವ್ರ ಒತ್ತಡವಿದೆಯೇ ?

ಶ್ರೀ ಇಕ್ಬಾಲ್ ಅನ್ಸಾರಿ (ವೈದ್ಯಕೀಯ ಶಿಕ್ಷಣ ಸಚಿವರು) : ಅ), ಆ) ಮತ್ತು ಇ) ಸರ್ಕಾರದ ಪರಿಶೀಲನೆಯಲ್ಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ತಾವು ಏನು ಹೇಳಿದ್ದೀರಿ, ಎಂದರೆ, 'ಇಲ್ಲ' ಎಂದು ಒಂದು ಪದ ಕೊಟ್ಟೂ ಬಿಟ್ಟಿದ್ದೀರಿ. ರಾಷ್ಟ್ರೀಕರಣ ಮಾಡುತ್ತೀರಾ ಎಂದು ಕೇಳಿದ್ದೇವೆ, ಹಿಂದೆ ಸಿಇಟಿ ಗಲಾಟೆ ಬಂದಾಗ ಆಗ ಇದ್ದಂತಹ ಸಚಿವರಾದ ಮಾನ್ಯ ಮಂಜುನಾಥ್‌ರವರು ಈ ಖಾಸಗಿ ವೈದ್ಯಕೀಯ ಕಾಲೇಜುಗಳಿಂದ ದೊಡ್ಡ ಸಮಸ್ಯೆ ಆಗಿದೆ, ಕರ್ನಾಟಕದಲ್ಲಿ ಅವರೇ ದೊಡ್ಡ ಪಾಳೇಗಾರರಾಗಿದ್ದರೆ, ಅವರದ್ದೇ ಎಲ್ಲಾ ನಡೆಯುತ್ತಿದೆ. ಆದ್ದರಿಂದ ಬಹಳ ಅನ್ಯಾಯವಾಗುತ್ತಿದೆ. ಮತ್ತು ಸಂಪೂರ್ಣವಾಗಿ ರಾಷ್ಟ್ರೀಕರಣ ಮಾಡುತ್ತೇವೆಂದು ಹೇಳಿದ್ದರು. ಈಗ ನೀವು ಇಲ್ಲವೆಂದು ಹೇಳಿದರೆ ಸರ್ಕಾರದ ನೀತಿ ಏನು? ಮತ್ತು ಒಂದು ಕಡೆ ನೀವು ಹೇಳಿದ್ದೀರಿ, ಹೊಸ ಐದು ಕಾಲೇಜುಗಳನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿ, ಈ ಕಾಲೇಜುಗಳನ್ನು ರಾಷ್ಟ್ರೀಕರಣ ಮಾಡಿದ್ದರೆ, ನಮಗೆ ಅನುಕೂಲವಾಗುತ್ತಿದೆ ಹೊಸ